(ಇಂದು ದಿಃ 28-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು :- 5ನೇ ಪ್ರತಿವಾದಿ ಪರ ಶ್ರೀ.RI ವಕೀಲರಿಂದ :-**

ದ್ಯಾಮಮ್ಮ ನನ್ನ ತಂದೆಯ ತಾಯಿ. ದೊಡ್ಡಪ್ಪ ದ್ಯಾಮಮ್ಮನ ತಂದೆ. ದ್ಯಾಮಮ್ಮನಿಗೆ ದೊಡ್ಡಪ್ಪನಿಂದ ಆಸ್ತಿಗಳು ಬಂದಿದ್ದವು ಎಂದರೆ ಸರಿ. ದ್ಯಾಮಮ್ಮ ತಾನು ಬಂದುಕಿರುವಾಗ ಕೇಲವು ಜಮೀನುಗಳನ್ನು ಮಾರಾಟ ಮಾಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣ ತಂದೆ ಬಸಪ್ಪ ಪೂಜಾರಿ ರವರಿಗೆ ಕೊಡ್ಲಾ ಗ್ರಾಮದ ಸರ್ವೆ ನಂಬರ 727 ರಲ್ಲಿ 4 ಎಕರೆ ಜಮೀನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ನಂತರ ಸಾಬಣ್ಣ ಸದರಿ ಜಮೀನನ್ನು ತನ್ನ ಮೊಮ್ಮಗ ಬೀರಪ್ಪನ ತಂದೆ ದೇವಿಂದ್ರಪ್ಪ ರವರ ಹೆಸರಿಗೆ ಮಾಡಿದ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಬಿರಪ್ಪನ ಹೆಸರಿಗೆ MR NO. 61/1991-92 ಮಂಜೂರಾಯಿತು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಬೀರಪ್ಪ ಸದರಿ ಜಮಿನಿಗೆ ಸಂಪೂರ್ಣ ಮಾಲಿಕ ಮತ್ತು ಕಬ್ಜಾದರ ಆದ ಎಂದರೆ ಸರಿಯಲ್ಲ. ಮುಟೇಷನ ನಂತರ ಸರ್ವೆ ನಂಬರ 727/1 ಆಯಿತ ಎಂದರೆ ನನಗೆ ಗೊತ್ತಿಲ್ಲ.

ಸದರಿ 4 ಎಕರೆ ಪೈಕಿ 2 ಎಕರೆ 20 ಗುಂಟೆಯನ್ನು ಸದರಿ ಬೀರಪ್ಪ 5ನೇ ಪ್ರತಿವಾದಿಗೆ ನೋಂದಾಯಿತ ಖರಿದಿ ಪತ್ರದ ಮೂಲಕ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಮಾರಾಟದ ನತಂರ ಮುಟೆಷನ ಆದ ನಂತರ ಸರ್ವೆ ನಬಂರ 727/7 ಆಯಿತು ಎಂದರೆ ನನಗೆ ಗೊತಿಲ್ಲ. ಖರೀದಿ ಮಾಡಿದಾಗಿನಿಂದ 2 ಎಕರೆ 20 ಗುಂಟೆ ಜಮೀನಿನಲ್ಲಿ 5ನೇ ಪ್ರತಿವಾದಿ ಸಂಪೂರ್ಣ ಮಾಲಿಕರಾಗಿ ಸ್ವಾಧಿನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹಾಕುವ ಮುಂಚೆ ನಾನು 5ನೇ ಪ್ರತಿವಾದಿಯನ್ನು ಪ್ರಶ್ನಿಸಿಲ್ಲ. ಬೀರಪ್ಪರವರನ್ನು ಈ ದಾವೆಯಲ್ಲಿ ಪಾರ್ಟೀ ಮಾಡಿಲ್ಲ ಎಂದರೆ ಸರಿ . 5ನೇ ಪ್ರತಿವಾದಿ ಮೇಲೆ ಯಾವುದೇ ಖ್ಯಾಜ್ಯ ಕಾರಣ ಇಲ್ಲದೆ ಇದ್ದರೂ ಕೂಡ ವಿನಃ ಕಾರಣ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು ದ್ಯಾಮಮ್ಮನ ತವರು ಮನೆಯ ಕಡೆಯ ಆಸಿತಗಳು ಆಗಿರುವುದರಿಂದ ಅವುಗಳಲ್ಲಿ ಭಾಗ ಕೇಳುವ ಯಾವುದೇ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ.

ದ್ಯಾವಮ್ಮ ಬದುಕಿರುವಾಗ ತನ್ನ ಸ್ವಯಿಚ್ಚೆಯಿಂದ ಕೆಲವು ಜಮೀನುಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

**(ಶ್ರೀ.RI ವಕೀಲರು ಮೇಲಿನ ವಾಟೀ ಸವಾಲಿನ ಜೊತೆ 3ನೇ ಪ್ರತಿವಾದಿ ಪರ ವಕೀಲರು ಮಾಡಿರುವ ವಾಟೀ ಸವಾಲನ್ನು ಕೂಡ ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು.)**

ವಾಟೀ ಸವಾಲು :- 7ನೇ ಪ್ರತಿವಾದಿ ಪರ ಶ್ರೀ. MSK ವಕೀಲರಿಂದ :-

ನನಗೆ ಈಗ ಸುಮಾರು 40 ವರ್ಷ ಇರಬಹುದು. ನಾನು ಅವಿದ್ಯಾವಂತೆ. ನಾನು ಚಿಕ್ಕವಳಿದ್ದಾಗ ನನ್ನ ತಂದೆ ತೀರಿಹೋಗಿದ್ದಾರೆ. ನನ್ನ ಚಿಕ್ಕಪ್ಪ ತೀರಿಹೋಗಿ 5 ವರ್ಷ ಆಗಿದೆ. ನನ್ನ ತಂದೆ ತೀರಿಹೋದಾಗ ನಾನು 3 ರಿಂದ 5 ವರ್ಷ ವಯಸ್ಸಿನವಳು ಆಗಿದ್ದೆ. ನನ್ನ ತಾತನ ಹೆಸರು ಆಶಣ್ಣ. ನನ್ನ ತಂದೆಯ ತಾಯಿ ಹೆಸರು ದ್ಯಾವಮ್ಮ. ದ್ಯಾವಮ್ಮಳ ತಂದೆ ಹೆಸರು ದೊಡ್ಡಪ್ಪ. ದೊಡ್ಡಪ್ಪನಿಗೆ ದ್ಯಾವಮ್ಮ ಒಬ್ಬಳೆ ಮಗಳು ಎಂದರೆ ನನಗೆ ಗೊತ್ತಿಲ್ಲ. ಆಶಣ್ಣ ದೊಡ್ಡಪ್ಪನ ಮನೆಗೆ ಮನೆಅಳೆತನಕ್ಕೆ ಹೋಗಿದ್ದರು. ದೊಡ್ಡಪ್ಪನಿಗೆ ದ್ಯಾವಮ್ಮ ಒಬ್ಬಳೆ ಮಗಳು ಎಂದರೆ ಸರಿ. ದಾವಾ ಜಮೀನು ದ್ಯಾವಮ್ಮಳ ಹೆಸರಿನಲ್ಲಿತ್ತು ಎಂದರೆ ಸರಿ. ದ್ಯಾವಮ್ಮ ದಾವಾಸತ್ತಿನ ಸಂಪೂರ್ಣ ಮಾಲಿಕಳು ಮತ್ತು ಕಬ್ಜಾದಾರಳು ಆಗಿದ್ದರು ಎಂದರೆ ಸರಿ. ದಾವಾ ಜಮೀನು ದೊಡ್ಡಪ್ಪನಿಂದ ಬಂದ ಜಮೀನು ಎಂದರೆ ಸರಿ. ದಾವಾ ಜಮೀನು ನನ್ನ ಅಜ್ಜಿಯ ತವರು ಮನೆಯಿಂದ ಬಂದ ಜಮೀನು ಎಂದರೆ ಸರಿ. ನನ್ನ ತಂದೆಗೆ ಆಸ್ತಿಗಳು ಇರಲಿಲ್ಲ ಎಂದರೆ ಸರಿ. ನನ್ನ ಅಜ್ಜಿ ಬದುಕಿದ್ದಾಗ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಅದೇರಿತೀ ನನ್ನ ತಂದೆ ಮತ್ತು ಅವರ ಸಹೋದರರಿಗೆ ಕೂಡ ದಾವಾ ಸ್ವತ್ತಿನಲ್ಲಿ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಜಮಿನಿನ ವಿಸ್ತಿರ್ಣ ನನಗೆ ಗೊತ್ತಿಲ್ಲ. ನನ್ನ ಅಜ್ಜಿಗೆ ಇದ್ದ ಜಮೀನಿನ ಪೈಕಿ ಅರ್ಧ ಜಮೀನುಗಳನ್ನು ಅವಳು ಬದುಕಿದ್ದಾಗಲೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಜಮಿನೀನ ಸರ್ವೆ ನಂಬರ ಹೇಳಲು ಬರುವುದಿಲ್ಲ. ಪೋಡಿಯಾದ ಸರ್ವೆ ನಂಬರಗಳು ಕೂಡ ಹೇಳಲು ಆಗುವುದಿಲ್ಲ.

ಧ್ಯಾವಮ್ಮ ಕುಟುಂಬದ ಅಡಚಣೆಗಾಗಿ ಮತ್ತು ದೊಡ್ಡಪ್ಪ ಹಾಗೂ ಚಿಕ್ಕಪ್ಪನ ಸಲುವಾಗಿ 7ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈರಮ್ಮ ಗಂಡ ಕಾಶಪ್ಪ ರವರಿಗೂ 2 ಎಕರೆ ಮಾರಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನು ಸರ್ವೆ ನಂಬರ 727/3 ರಲ್ಲಿನ 2 ಎಕರೆ ಜಮೀನನ್ನು 7ನೇ ಪ್ರತಿವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ರೂ. 6,600/-ಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.1990 ರಲ್ಲಿ 10/- ರೂ. ಮುಖಬೆಲೆಯ ಛಾಪಾಕಾಗದದ ಮೇಲೆ ಬರೆದು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ನನ್ನ ತಂದೆ ಮತ್ತು ಆತನ ಸಹೋದರರು ಮತ್ತು ನನ್ನ ತಾತ ಆಶಪ್ಪ ಕೂಡ ಸಹಿ ಮಾಡಿದದರು ಎಂದರೆ ಸರಿಯಲ್ಲ. ಅದೇ ರೀತಿ 4 ಜನ ಪಂಚರು ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಪತ್ರಕ್ಕೆ ನನ್ನ ತಂದೆಯ ಸಹೋದರರು ಒಪ್ಪಿ ಗೆ ಕೊಟ್ಟು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

2 ಎಕರೆ ಜಮೀನನ್ನು ಮಾರಾಟ ಮಾಡಿದ ನಂತರ 1993 ರಲ್ಲಿ 7ನೇ ಪ್ರತಿವಾದಿ ಹೆಸರಿಗೆ ಮುಟೇಷನ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಗ್ರಾಮ ಲೆಕ್ಕಾಧಿಕಾರಿ ನೋಟಿಸ ಜಾರಿ ಮಾಡಿ ನಂತರ ಮುಟೇಷನ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುಟೇಷನಗೆ ನಾವು ತಕರಾರು ಮಾಡಿಲ್ಲ ಎಂದರೆ ಸರಿ. ಕಾರಣ 1993 ರಲ್ಲಿ ಮುಟೇಷನ ಆಯಿತು ಎಂದರೆ ನನಗೆ ಗೊತ್ತಿಲ್ಲ. 1993 ರಿಂದ ಇಲ್ಲಿಯವರೆಗೆ 7ನೇ ಪ್ರತಿವಾದಿ ತಾನು ಕೊಂಡುಕೊಂಡ ಜಮೀನಿನಲ್ಲಿ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಗುವಳಿ ಕೂಡ ಅವರೆ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಆದಾಗಿನಿಂದ 7ನೇ ಪ್ರತಿವಾದಿ ಜಮೀನಿನಲ್ಲಿ ಕಬ್ಜಾದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ಸಂಗತಿಗಳು ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಇಲ್ಲಿಯವರಗೆ 7ನೇ ಪ್ರತಿವಾದಿಗೆ ಯಾವುದೇ ನೋಟಿಸ ಕೊಟ್ಟಿಲ್ಲ. 1993 ರಿಂದ ಇಲ್ಲಿಯವರಗೆ 7ನೇ ಪ್ರತಿವಾದಿ ಕಬ್ಜಾದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಖರೀದಿ ಆದಾಗಿನಿಂದ ಇಲ್ಲಿಯವರೆಗೆ ಪಹಣಿಗಳು 7ನೇ ಪ್ರತಿವಾದಿ ಹೆಸರಿಗೆ ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗ 7ನೇಪ್ರತಿವಾದಿಗೆ ಪಟ್ಟಾಪುಸ್ತಕ ಕುಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 7ನೇ ಪ್ರತಿವಾದಿ ಸರ್ಕಾರಕ್ಕೆ ಜಮೀನಿನ ಕರ ಪಾವತಿ ಮಾಡುತ್ತಿದ್ದಾರೆ ಎಂದರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಆಧಾರದ ಮೇಲೆ ಪ್ರಧಾನ ಮಂತ್ರಿರವರ ರೈತ ಸನ್ಮಾನ ಯೋಜನೆ ಅಡಿ 7ನೇಪ್ರತಿವಾದಿಗೆ ಬ್ಯಾಂಕ ಖಾತೆಗೆ ವರ್ಷಕ್ಕೆ 6000/- ಜಮೆ ಆಗುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ 727/3 ಒಟ್ಟು ವಿಸ್ತೀರ್ಣ 5 ಎಕರೆ 28 ಗುಂಟೆ ಪೈಕಿ 7ನೇ ಪ್ರತಿವಾದಿ 2 ಎಕರೆ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗದಲ್ಲಿ ನನ್ನ ತಂದೆಗೆ ಹಾಗು ಆತನ ಸಹೋದರರಿಗೆ ಎಷ್ಟು ವಿಸ್ತೀರ್ಣದ ಜಮೀನುಗಳು ಬಂದಿವೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪನ ನಡುವೆ ಭಾಗ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

ದಾವೆಯಲ್ಲಿ ತಕರಾರು ಸಲಿಸುವ ಮುಂಚೆ ಬೇರೆಯವರಿಂದ ಸಲಹೆ ಪಡೆದುಕೊಂಡಿಲ್ಲ. ನಾನು ಈ ದಾವೆ ಸಲ್ಲಿಸುವ ಮುಂಚೆ 7ನೇ ಪ್ರತಿವಾದಿಯನ್ನು ಬೇಟಿ ಮಾಡಿ ಈ ಬಗ್ಗೆ ಪ್ರಶ್ನೇ ಮಾಡಿಲ್ಲ. ಧ್ಯಾವಮ್ಮ 6600/- ಕ್ಕೆ ಜಮೀನು ಮಾರಾಟ ಮಾಡಿದ್ದು ಈಗ ಜಮೀನುಗಳ ಬೆಲೆ ಹೆಚ್ಚಾಗಿದ್ದು ಹೇಗಾದರು ಮಾಡಿ 7ನೇ ಪ್ರತಿವಾದಿಯಿಂದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**